

ಸೋಲಿನ ನೋವಿನ ಗೆರೆಗಳ ಹೊತ್ತ ವೆಸ್ಟ್ ಇಂಡೀಸ್ ಆಟಗಾರ ರೋವ್‌ಮನ್ ಪೊವೆಲ್

# ಮಂಡಿಯೂರಿದ ಕ್ರಿಕೆಟ್ ದೈತ್ಯ

**ಒಂದೂವರೆ ದಶಕದ ಕಾಲ ಯಾವ ಟೆಸ್ಟ್ ಸರಣಿಯನ್ನೂ ಸೋಲದ ದಾಖಲೆ ಹೊಂದಿರುವ ವೆಸ್ಟ್ ಇಂಡೀಸ್ ತಂಡ ಕುಸಿಯುತ್ತಾ ಹೋಗಿ ಈಗ ನೆಲಕಚ್ಚಿದೆ. ರಾಜಕೀಯ, ಆರ್ಥಿಕ ಸ್ಥಿತಿಗಳ ಜತೆಗೆ ಟ್ವೆಂಟಿ 20 ಕ್ರಿಕೆಟ್‌ನ ಪ್ರಲೋಭನೆ ಗಟ್ಟಿಯಾಗಿ ಕಟ್ಟಿದ್ದ ದ್ವೀಪರಾಷ್ಟ್ರಗಳ ತಂಡವೊಂದರ ಜಂಘಾಬಲ ಇಷ್ಟು ಉಡುಗಿಹೋಗುವಂತೆ ಮಾಡಿರುವುದು ಅಚ್ಚರಿಯಾದರೂ ಸತ್ಯ. ಈ ಸಲದ ಏಕದಿನ ವಿಶ್ವಕಪ್‌ನಲ್ಲಿ ಎರಡು ಬಾರಿ ಚಾಂಪಿಯನ್ ಆಗಿದ್ದ ವಿಂಡೀಸ್ ಆಡುವುದಿಲ್ಲವೆನ್ನುವುದೇ ಒಂದು ಚೋದ್ಯದಂತಿದೆ.**

■ **ವಿಶಾಖ ಎನ್.**

ಆಂಡಿ 'ಹಿಟ್ ಮ್ಯಾನ್' ರಾಬರ್ಟ್ಸ್, ಮೈಕಲ್ 'ವಿಸ್ಪರಿಂಗ್ ಡೆತ್' ಹೋಲ್ಡಿಂಗ್. ವೆಸ್ಟ್ ಇಂಡೀಸ್‌ನ ಈ ಇಬ್ಬರು ವೇಗದ ಬೌಲಿಂಗ್ ದಿಗ್ಗಜರಿಗೆ ಹೆಸರುಗಳ ನಡುವೆಯೇ ಮೂಡಿದ ಗುಣವಿಶೇಷಣಗಳು ಹೇಗಿದ್ದವು ನೋಡಿ. ಆಂಡಿ ರಾಬರ್ಟ್ಸ್, ಮೈಕಲ್ ಹೋಲ್ಡಿಂಗ್ ಇಬ್ಬರನ್ನೂ ನಿಶ್ಶಬ್ದವೂ, ನಿರ್ಭೀತವೂ ಆದ ಚಿರತೆಯ ದಾಳಿಕೋರತನಕ್ಕೆ ಹೋಲಿಸಿದ್ದರು. 1975–76ರಲ್ಲಿ ಆಸ್ಟ್ರೇಲಿಯಾದ ಎದುರು 5–1ರಲ್ಲಿ ಟೆಸ್ಟ್ ಸರಣಿಯಲ್ಲಿ ವೆಸ್ಟ್‌ಇಂಡೀಸ್ ಸೋತು ಸುಣ್ಣವಾಗಿತ್ತು. ಮತ್ತೆ ಆಡಲು ಕಣಕ್ಕೆ ಇಳಿಯುವ ಹೊತ್ತಿಗೆ ಕನ್ನಡಕಧಾರಿ ಕ್ಲೈವ್ ಲಾಯ್ಡ್, ಈ ರಾಬರ್ಟ್ಸ್ ಹಾಗೂ ಹೋಲ್ಡಿಂಗ್ ಎಂಬ ಅಸ್ತ್ರಗಳಿಗೆ ಸಾಣೆ ಹಿಡಿದಿದ್ದರು. ವೇಗವಷ್ಟೇ ಸಾಲದು, ಎದುರಾಳಿಯನ್ನು ಹುರಿದು ಮುಕ್ಕುವಂಥ ನೋಟವೂ ಬೇಕು – ಇದು ತಂತ್ರ. ಇದನ್ನು ಹೇಳಿಕೊಟ್ಟಿದ್ದವರು ಆಸ್ಟ್ರೇಲಿಯಾ ವೇಗಿಗಳಾದ ಡೆನಿಸ್ ಲಿಲ್ಲಿ ಹಾಗೂ ಜೆಫ್ ಥಾಮ್ಸನ್. ಈ ಇಬ್ಬರೂ ಆ ಕಾಲಘಟ್ಟದಲ್ಲಿ ಪ್ರತಿ ಗಂಟೆಗೆ 160 ಕಿ.ಮೀ. ವೇಗದಲ್ಲಿ ಹಾಕುತ್ತಿದ್ದ ಶಾರ್ಟ್ ಪಿಚ್ ಎಸೆತಗಳು ಎದೆ ನಡುಗಿಸುತ್ತಿದ್ದವು. ಪಕ್ಕೆಗೋ ಮುಖಕ್ಕೋ ಚೆಂಡು ಬಡಿದರೆ ರಕ್ತದ ಕಲೆ ಪಕ್ಕಾ.

1975–76ರಲ್ಲಿ ಟೆಸ್ಟ್ ಸರಣಿಯನ್ನು ಹೀನಾಯವಾಗಿ ಸೋತ ನಂತರ ವಿಂಡೀಸ್ 1976ರಿಂದ 1995ರವರೆಗೆ ಆಸ್ಟ್ರೇಲಿಯಾ ಎದುರು ಆರು ಟೆಸ್ಟ್ ಸರಣಿಗಳಲ್ಲಿ ಒಂದನ್ನೂ ಸೋಲಲಿಲ್ಲ. 1980ರಿಂದ 1995ರವರೆಗೆ ವಿಶ್ವದ ಯಾವ ತಂಡದ ವಿರುದ್ಧವೂ ವಿಂಡೀಸ್ ಟೆಸ್ಟ್ ಸರಣಿಯಲ್ಲಿ ಸೋತೇ ಇರಲಿಲ್ಲ. ಈಗ ಮೊದಲ ಬಾರಿಗೆ ಏಕದಿನ ಪಂದ್ಯಗಳ ವಿಶ್ವಕಪ್ ಈ